ಇಂಜನಿಯರಿಂಗ್ ವಿಭಾಗ ಇವರಿಗೆ ಜಿಲ್ಲಾ ಪಂಚಾಯಿತಿಯಿಂದ ಅನುಮತಿ ನೀಡಲಾಗಿದೆ.

ಆ) ಶಾಲೆಗಳಿಗೆ ಕಾಂಪೌಂಡ್‌ಗಳು ಇರುವುದಿಲ್ಲ. ಆದರೆ ಜಮೀನು ಒತ್ತುವರಿ ಆಗಿರುವುದಿಲ್ಲ. ಹಾಗೂ ಇದರಿಂದ ವಿದ್ಯಾರ್ಥಿಗಳಿಗೆ ಯಾವ ಅಡಚಣೆಯೂ ಉಂಟಾಗಿರುವುದಿಲ್ಲ.

ನೆಲಮಂಗಲ ಸಾರ್ವಜನಿಕ ಆಸ್ಪತ್ರೆಯಲ್ಲಿ ಉಪಕರಣಗಳನ್ನು ಒದಗಿಸುವುದು.

138(76)

ಶ್ರೀ ಅಂಜನಮೂರ್ತಿ(ನೆಲಮಂಗಲ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಅದರಲ್ಲೂ ವಿಶೇಷವಾಗಿ ತುಮಕೂರು ನೆಲಮಂಗಲ ಮಧ್ಯೆ ಹೆಚ್ಚಿನ ಅಪಘಾತಗಳಿಂದಾಗಿ ರಾಜ್ಯದ ಇನ್ನಿತರ ಭಾಗಗಳಿಗಿಂತ ಹೆಚ್ಚಿನ ಸಾವು ನೋವು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಅಪಘಾತಕ್ಕೊಳಗಾದವರ ಹಿತದೃಷ್ಟಿಯಿಂದ ನೆಲಮಂಗಲ ಸಾರ್ವಜನಿಕ ಆಸ್ಪತ್ರೆಗೆ ನುರಿತ ವೈದ್ಯರನ್ನು ಹಾಗೂ ಸ್ಕ್ಯಾನಿಂಗ್, ಬಾಯ್ಲರ್ಸ್ ಉಪಕರಣ(ಅರವಳಿಕೆ) ಮತ್ತು ಟ್ರಾಮಾ ಕೇರ್ ಸೆಂಟರ್ ವಿಭಾಗಕ್ಕೆ ಬೇಕಾದ ಉಪಕರಣಗಳನ್ನು ಕೂಡಲೇ ಒದಗಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೆ?

ಡಾ॥ ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ ಮತ್ತು ಆ) ಅಪಘಾತಕ್ಕೊಳಗಾದವರ ಹಿತದೃಷ್ಟಿಯಿಂದ ನೆಲಮಂಗಲ ಸಾರ್ವಜನಿಕ ಆಸ್ಪತ್ರೆಯಲ್ಲಿ ಹತ್ತು ಹಾಸಿಗೆಯ ಒಂದು ಟ್ರಾಮಾ ಕೇರ್ ಸೆಂಟರ್ ವಿಭಾಗವನ್ನು ತೆರೆಯಲಾಗಿದೆ. ಇದಕ್ಕೆ ಪೂರಕವಾಗಿ ಒಂದು ಅಂಬ್ಯುಲೆನ್ಸ್, ಒಂದು ಸುಸಜ್ಜಿತ ಚಿಕ್ಕ ಮತ್ತು ಪ್ರಧಾನ ಶಸ್ತ್ರಚಿಕಿತ್ಸಾ ಕೊಠಡಿಯನ್ನು ನಿರ್ಮಿಸಲಾಗಿದೆ. ಕ್ಷ-ಕಿರಣ ಯಂತ್ರಗಳನ್ನು ಮತ್ತು ಅಘಘಾತ ಶಸ್ತ್ರಚಿಕಿತ್ಸಾ ಉಪಕರಣಗಳನ್ನು ಒದಗಿಸಲಾಗಿದೆ. ಬಾಯಲ್ಸ್ ಉಪಕರಣ(ಅರವಳಿಕೆ) ಒದಗಿಸಲಾಗುವುದು. ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಯಂತ್ರವನ್ನು 100 ಹಾಸಿಗೆಗಳ ಮೇಲ್ಪಟ್ಟ ಆಸ್ಪತ್ರೆಗಳಿಗೆ ಮಾತ್ರ ಒದಗಿಸಬೇಕಾಗಿರುವುದರಿಂದ, ನೆಲಮಂಗಲ ಆಸ್ಪತ್ರೆಗೆ ಈ ಉಪಕರಣವನ್ನು ಒದಗಿಸಿರುವುದಿಲ್ಲ. ಇಬ್ಬರು ಮೂಳೆ ತಜ್ಞ ವೈದ್ಯರು ಹಾಗೂ ಇಬ್ಬರು ನುರಿತ

ವೈದ್ಯರುಗಳು ಕೆಲಸ ನಿರ್ವಹಿಸುತ್ತಿದ್ದಾರೆ.

ಕರ್ನಾಟಕ ರಾಜ್ಯಾದ್ಯಂತ ಗೌರವ ಶಿಕ್ಷಕರ ವಿವರ.

140(435)

ಶ್ರೀ ಅಂಜನಮೂರ್ತಿ(ನೆಲಮಂಗಲ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯಾದ್ಯಂತ ಗೌರವ ಶಿಕ್ಷಕರ ಸಂಖ್ಯೆ ಎಷ್ಟು;

ಆ) ಆ ಗೌರವ ಶಿಕ್ಷಕರಲ್ಲಿ ಎಷ್ಟು ಜನ ವಯೋಮಿತಿ ಮೀರಿದವರಿರುತ್ತಾರೆ; (ಜಿಲ್ಲಾವಾರು ಮಾಹಿತಿ ನೀಡುವುದು);

ಇ) ವಯೋಮಿತಿ ಮೀರುತ್ತಿರುವವರನ್ನು ಅದೇ ಹುದ್ದೆಯಲ್ಲಿ ಖಾಯಂಗೊಳಿಸಲು ಮಾನವೀಯತೆ ದೃಷ್ಟಿಯಿಂದ ಸರ್ಕಾರ ಏನು ಕ್ರಮ ಕೈಗೊಂಡಿದೆ;

ಈ) ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಗೌರವ ಶಿಕ್ಷಕರ ಸಂಖ್ಯೆ ಎಷ್ಟು?

ಶ್ರೀ ಹೆಚ್.ವಿಶ್ವನಾಥ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಪ್ರಾಥಮಿಕ ಶಾಲೆಗಳಲ್ಲಿ 247 ಪ್ರೌಢ ಶಾಲೆಗಳಲ್ಲಿ 28

ಆ) ಇವರಲ್ಲಿ ಹೆಚ್ಚಿನ ಸಂಖ್ಯೆಯವರು ವಯೋಮಿತಿ ಮೀರಿದವರಾಗಿರುತ್ತಾರೆ.

ಇ) ಖಾಯಂ ಗೊಳಿಸಲು ನೇಮಕಾತಿ ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಆದರೆ, ಶಿಕ್ಷಕರ ನೇರ ನೇಮಕಾತಿಯಲ್ಲಿ ಆಯ್ಕೆಗಾಗಿ ಈ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ವಯೋಮಿತಿ ಸಡಿಲಿಸಿದ ಹಾಗೂ ಸೇವಾ ಕೃಪಾಂಕ ನೀಡುವ ಅವಕಾಶ ಕಲ್ಪಿಸಿದೆ.

ಈ) ಪರಿಶಿಷ್ಟ ಜಾತಿಯ 216 ಹಾಗೂ ಪರಿಶಿಷ್ಟ ವರ್ಗದ 3 ಗೌರವ ಶಿಕ್ಷಕರಿದ್ದಾರೆ.

ರಾಜ್ಯದಲ್ಲಿರುವ ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತ್‌ಗಳಿಗೆ ಅನುದಾನ.